# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## S.C. No. 296/2022

**ಸಾಕ್ಷಿಯನ್ನು ದಿನಾಂಕ 16.3.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜಯಂತ್ | ಪಿ.ಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | : | ಸೋಮಶೇಖರ | ಸಿ.ಡಬ್ಲ್ಯೂ-2 |
| ವಯಸ್ಸು | : | 33 | |
| ಉದ್ಯೋಗ | : | ಆಯಿಲ್ ಮಿಲ್ ಕೆಲಸ | |
| ವಾಸ ಸ್ಥಳ | : | ಪಾಂಡವಪುರ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಚಾಸ 1, 3 ಮತ್ತು 4 ರವರ ಪರಿಚಯವಿದೆ. ಚಾಸ 5 ಮತ್ತು 6 ರವರ ಪರಿಚಯವಿಲ್ಲ. ದಿನಾಂಕ 6.4.2021 ರಂದು ನಾನು ಚಾಸ 4 ಮಧುಕಿರಣ್ ಇವರ ಮನೆಗೆ ಚಾಸ 1 ಮತ್ತು 3 ರವರ ಜೊತೆ ಹಬ್ಬಕ್ಕೆ ಹೋಗಿದ್ದೆವು. ಆ ಕಾಲಕ್ಕೆ ಚಾಸ 4 ರವರ ತೋಟದ ಮನೆಯಲ್ಲಿ ಊಟಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಆಗ ಮಧ್ಯಾಹ್ನ 2-2.30 ಸಮಯದಲ್ಲಿ ಪಕ್ಕದ ತೋಟದಲ್ಲಿ ಗಲಾಟೆಯಾಗುತ್ತಿತ್ತು. ಆ ಕಾಲಕ್ಕೆ ಮಧುಕಿರಣ್ ಇವರ ಆಳು ಪಕ್ಕದ ತೋಟಕ್ಕೆ ಸೌದೆ ತರಲು ಹೋದಾಗ ಗಲಾಗೆಯಾಗುತ್ತಿತ್ತು. ಪಕ್ಕದ ತೋಟದವರ ಹೆಸರು ಗೊತ್ತಿಲ್ಲ. ಆಗ ಪ್ರತಾಪ್ ಮತ್ತು ಮಧುಕಿರಣ್ ಆ ಗಲಾಟೆ ನೋಡಲು ಹೋದರು. ಆಗ ತುಂಬಾ ಶಬ್ದ ಬಂದಿದ್ದರಿಂದ ನಾನು ಸಹ ಅಲ್ಲಿಗೆ ಹೋಗಿದ್ದೆ. ನಾನು ಅಲ್ಲಿಗೆ ಹೋದಾಗ ಪ್ರತಾಪ್ ಹೊಟ್ಟೆಯಲ್ಲಿ

ರಕ್ತ ಬರುತ್ತಿತ್ತು. ನಾನು ಪ್ರತಾಪ್ ಇವರನ್ನು ಬಿಡಿಸಲು ಹೋದಾಗ ನನ್ನ ಎಡಪೆಕ್ಕೆ ಹಾಗೂ ತಲೆಗೆ ಚಾಕುವಿನಿಂದ ಮತ್ತು ರಾಡಿನಿಂದ ಹಲ್ಲೆ ಮಾಡಿದರು. ಆ ಕಾಲಕ್ಕೆ ನಮಗೆ ಯಾರು ಹೊಡೆದರು ಎಂದು ಗೊತ್ತಿಲ್ಲ. ಆ ಕಾಲಕ್ಕೆ ಚಾಸ3 ಮತ್ತು 4ರವರಿಗೂ ಸಣ್ಣಪುಟ್ಟ ಗಾಯವಾಗಿತ್ತು. ಆದರೆ ಅವರಿಗೆ ಯಾರು ಹೊಡೆದರು ಎಂದು ಗೊತ್ತಿಲ್ಲ. ಘಟನೆ ಬಳಿಕ ನಾನು ಮತ್ತು ಪ್ರತಾಪ ನಂಜನಗೂಡಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆವು. ಚಾಸ3 ಮತ್ತು 4ರವರಿಗೆ ಹೆಚ್ಚಿನ ಗಾಯವಾಗದಿದ್ದರಿಂದ ಅವರು ಚಿಕಿತ್ಸೆ ಪಡೆದಿಲ್ಲ. ನಂತರ ನಾನು ಮತ್ತು ಪ್ರತಾಪ ಕೆ.ಆರ್.ಆಸ್ಪತ್ರೆಗೆ ಹೋಗಿದ್ದೆವು. ನಂತರ ಚಾಸ1 ಇವರು ವಿಜಯನಗರದ ಐಶ್ವರ್ಯ ಆಸ್ಪತ್ರೆಗೆ ಹೋಗಿದ್ದರು ಮತ್ತು ನಾನು ನಾರಾಯಣ ಹೃದಯಾಲಯ ಆಸ್ಪತ್ರೆಗೆ ಹೋಗಿದ್ದೆ.

ಈಗ ನಾನು ನೋಡುತ್ತಿರುವ ನೋಟಿಸ್ ಮತ್ತು ಮಹಜರಿನಲ್ಲಿರುವ ಸಹಿ ನನ್ನದಿದೆ. ಸದರಿ ನೋಟಿಸ್ ಮತ್ತು ಮಹಜರನ್ನು ನಿಪಿ11 ಮತ್ತು 12 ಎಂದು, ಸಹಿಯನ್ನು ನಿಪಿ11ಎ ಮತ್ತು 12ಎ ಎಂದು ಗುರುತಿಸಿದೆ. ನಾನು ಆಸ್ಪತ್ರೆಯಿಂದ ಡಿಸ್‌ಚಾರ್ಜ ಆದ ಬಳಿಕ ನನ್ನ ರಕ್ತ ಹತ್ತಿದ ಟೀಶರ್ಟ ಹಾಜರುಪಡಿಸಿದಾಗ ನಿಪಿ11 ಮತ್ತು 12ಕ್ಕೆ ನನ್ನ ಸಹಿ ಪಡೆದಿದ್ದಾರೆ. ಈಗ ನಾನು ನೋಡುತ್ತಿರುವ ಟೀಶರ್ಟ ಅದೇ ಇದ್ದು ಅದನ್ನು ಎಂಓ6 ಎಂದು ಗುರುತಿಸಿದೆ. ನನ್ನ ಟೀಶರ್ಟಗೆ ರಕ್ತ ಹತ್ತಿದ್ದರಿಂದ ಅದನ್ನು ಪೋಲಿಸರು ಪಡೆದಿದ್ದರು. ನಂಜನಗೂಡಿನ ನ್ಯಾಯಾಲಯದಲ್ಲಿ ಸಹ ಹೇಳಿಕೆ ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ಹೇಳಿಕೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಹೇಳಿಕೆಯನ್ನು ನಿಪಿ13 ಎಂದು, ಸಹಿಯನ್ನು ನಿಪಿ13ಎ ಎಂದು ಗುರುತಿಸಿದೆ. ಆ ಕಾಲಕ್ಕೆ ನಮಗೆ ಯಾರು ಹೊಡೆದಿದ್ದಾರೆ ಎಂದು ಹೇಳಿಕೆ ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ಎಂಓ1 ರಿಂದ 4 ಯಾವುವೆಂದು

ನನಗೆ ಗೊತ್ತಿಲ್ಲ. ಎಂಓ 5 ಪ್ರತಾಪನ ಶರ್ಟ ಇದೆ. ಪೋಲಿಸರಿಗೆ ನನಗೆ ಹೊಡೆದ ವ್ಯಕ್ತಿಗಳ ಹೆಸರನ್ನು ನಾನು ಹೇಳಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಈ ಮೊದಲು ಎಲ್ಲಿಯೂ ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ, ಪರಿಶೀಲಿಸಿ ಸಕಾರಣಗಳಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಘಟನೆ ಕಾಲಕ್ಕೆ 1 ನೇ ಆರೋಪಿ ಪ್ರಕಾಶ ನನಗೆ ಮತ್ತು ಚಾಸ 1 ಪ್ರತಾಪನಿಗೆ ಚಾಕುವಿನಿಂದ ಚುಚ್ಚಿದ ಎಂದು ಪೋಲಿಸರಿಗೆ ಹೇಳಿಕೆ ನೀಡಿಲ್ಲ. 3 ನೇ ಆರೋಪಿ ಸೋಮು ನನಗೆ ಕಬ್ಬಿಣದ ರಾಡಿನಿಂದ ತಲೆಯ ಭಾಗಕ್ಕೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಶಿವರಾಜು ಚಾಸ 3 ಅರುಣೇಶನಿಗೆ ರಾಡಿನಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಗೊತ್ತಿಲ್ಲ. 3 ಮತ್ತು 4 ನೇ ಆರೋಪಿತರು ರಾಡಿನಿಂದ ಚಾಸ 4 ರವರ ಮೈಕೈಗೆ ಹೊಡೆದಿರುತ್ತಾರೆ ಎಂದು ಹೇಳಿಕೆ ನೀಡಿಲ್ಲ. ದಿನಾಂಕ 10.4.2021 ರಂದು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನ್ಯಾಯಾಲಯದ ಮುಂದಿರುವ ಆರೋಪಿತರೇ ನನಗೆ ಮತ್ತು ಚಾಸ 1, 3 ಮತ್ತ 4 ರವರಿಗೆ ಎಂಓ 1 ರಿಂದ 4 ಎಂದು ಗುರುತಿಸಿರುವ ಚಾಕು ಮತ್ತು ರಾಡಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ನಾನು ಅವರನ್ನು ನೋಡಿಲ್ಲ. ಈ ಬಗ್ಗೆ "ಆಗ ನಾನು, ಪ್ರತಾಪ ಮತ್ತು ಅರುಣೇಶರವರು ತಡೆಯಲು ಹೋದಾಗ ------------------------------ ಮೈಕೈಗೆ ಸಣ್ಣಪುಟ್ಟ ನೋವು ಮಾಡಿದರು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ಹೇಳಿಕೆಯನ್ನು ನಿಪಿ14 ಎಂದು ಗುರುತಿಸಿದೆ. ಆರೋಪಿತರು ಹಲ್ಲೆ ಮಾಡಿದ್ದಾರೆ ಎಂದು ಗೊತ್ತಿದ್ದರೂ ಸಹ ಈಗ ಅವರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಕು, ಕಬ್ಬಿಣದ ರಾಡನ್ನು ಹಾಗೂ ಆರೋಪಿತರನ್ನು ಘಟನೆ ಕಾಲಕ್ಕೆ ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ**

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು